ಪಾಪಗಳಿಗೆ ನನ್ನ ಮಗಳು ಬಲಿಯಾದ್ಲು' ಎಂದದ್ದಕ್ಕೆ ಒಂದು ಕೈಯಲ್ಲಿ ಪಂಚೆಯನ್ನು ಮೇಲೆತ್ತಿ ಅದರ ಜೊತೆಗೆ ಕಾಲನ್ನೂ ಎತ್ತಿ 'ಮುಚ್ಚು ಬಾಯಿ ರಂಡೆ' ಎಂದ. ಹೆಂಡತಿ ಸ್ವಲ್ಪವೂ ಅಲುಗಾಡದೆ ಮಗಳ ತಲೆ ಸವರುತ್ತಿದ್ದಳು. ಕೊನೆಗೆ 'ಅಂತಾದ್ದೇನೂ ಆಗಿಲ್ಲ' ಎನ್ನುತ್ತಾ ಸಾಹುಕಾರ ಹೊರನಡೆದ. ಅಲ್ಲಿಗೆ ಮಗಳು ಅವರವ್ವನಂತೆ ಕಣ್ಣೀರಿನೊಂದಿಗೆ ಮಾತು ಆರಂಭಿಸಿದಳು.

ಊರೆಲ್ಲ ಯಥಾಸ್ಥಿತಿಯಲ್ಲಿರುವುದನ್ನು ಕಂಡ ಚಂದ್ರು ನಿರಾಶೆಗೊಂಡನಾದರೂ ಸಾಹುಕಾರನ ಮನೆಯಲ್ಲಿ ಎದ್ದಿರಬಹುದಾಗ ಕೋಲಾಹಲವನ್ನು ಕಲ್ಪಿಸಿಕೊಂಡು ಖುಷಿ ಪಡುತ್ತಿದ್ದನು. ಅವ್ವ ಯಾವಾಗ ಮಾತನಾಡುವಂಗಾಗಿ ತನ್ನ ಕಾರ್ಯವನ್ನು ಶ್ಲಾಘಿಸುವಳೋ ಎಂದು ಅವಳ ಶುಶ್ರೂಷೆಗೆ ಎಂದಿನಂತೆ ಇಳಿದನಾದರೂ ನೀಲವ್ವ ಇತ್ತೀಚೆಗೆ ಅವನಿಗೆ ಸರಿಯಾಗಿ ಸ್ಪಂದಿಸುತ್ತಿರಲಿಲ್ಲ. ಚಂದ್ರುವೂ ಸಹ ಸಾಹುಕಾರನ ಮನೆಯಲ್ಲಿ ಏನು ನಡೆಯುತ್ತಿದೆ ಎಂದು ತಿಳಿದುಕೊಳ್ಳಲು ಊರೊಳಗೇ ಹೆಚ್ಚು ಇರುತ್ತಿದ್ದರಿಂದ ನೀಲವ್ವನ ಕಡೆ ಹೆಚ್ಚು ಗಮನ ಹರಿಸಲಾಗುತ್ತಿರಲಿಲ್ಲ. ಮಲ್ಲಣ್ಣ ನೀಲವ್ವನೊಂದಿಗೆ ಹೆಚ್ಚು ಕಾಲ ಕಳೆಯಲಾರಂಭಿಸಿದ್ದನು. ಅವನಿಗೂ ಸಹ ಏನೋ ದಿಗಿಲು ಆವರಿಸಿ ಅದನ್ನೆಲ್ಲಾ ನೀಲವ್ವನೊಂದಿಗೆ ಹೇಳಿಕೊಳ್ಳುತ್ತಿದ್ದನು.

ಅಂದು ನೀಲವ್ವ ಎಂದಿನಂತಿರಲಿಲ್ಲ. ಒಂದೇ ಸಮನೆ ಬಾಯಿಯಿಂದ ಜೊಲ್ಲು ಸೋರುತ್ತಿತ್ತು. ಹೆಚ್ಚು ಸದ್ದನ್ನೂ ಮಾಡುತ್ತಿದ್ದಳು. ಚಂದ್ರು ಹೊರಹೋಗಿದ್ದ. ಮಲ್ಲಣ್ಣ ನೀರು ಕುಡಿಸಿ ಗಾಬರಿಯಿಂದ 'ಏನಾತಮ್ಮಿ' ಎಂದು ಕೇಳುತ್ತಿದ್ದ. ಈ ಕ್ಷಣದಲ್ಲಿ ಒಮ್ಮೆಲೇ ನೀಲವ್ವ ತನ್ನ ಕೈ ಹಿಡಿದುಕೊಂಡದ್ದನ್ನು ಕಂಡು ಆಶ್ಚರ್ಯ ಪಟ್ಟ. ನೀಲವ್ವ ಇದ್ದಕ್ಕಿದ್ದಂತೆ ಸ್ಪಷ್ಟವಾಗಿ 'ಸಾಕ್ಷಿ ಹೇಳಬೇಕು' ಎಂದಳು. ಮಾತು ಚುರುಕಾಗಿತ್ತು. ವೀಲ್ ಚೇರ್ ಮೇಲೆ ಕೂರಿಸಿಕೊಂಡವನೇ ಮಲ್ಲಣ್ಣ ಊರಿನ ಕ್ರಾಸಿಗಿಂತಲೂ ಮುಂದೆ ಬಂದ. ನೀಲವ್ವನ ಮಾತು ಹೆಚ್ಚಾಗುತ್ತಿತ್ತು. ಅಳುತ್ತಾ 'ನೀವೆಲ್ಲಾ ಒಂದೇ' ಎನ್ನುತ್ತಿದ್ದಳು. ಕೋಪದಿಂದ 'ಸುಮ್ನೆ ಬಿಡಾಕಿಲ್ಲ' ಎಂದರಚುತ್ತಿದ್ದಳು. ಮಲ್ಲಣ್ಣ 'ರವಟ್ ಸುಮ್ಕಿರಮ್ಮಿ ಕೈ ಮುಗಿತೀನಿ' ಎನ್ನುತ್ತಿದ್ದ. ಸ್ವಲ್ಪ ಹೊತ್ತಿನ ನಂತರ ಆಟೊ ಬಂದಿತು.

ಕಪ್ಪನೆಯ ಆಟೊ ಊರಿನ ಕೊನೆಯ ಮನೆಯನ್ನಿನ್ನೂ ದಾಟಿರಲಿಲ್ಲ. ಹಿಂದೆ ಓಡಿ ಬರುತ್ತಿದ್ದ ಚಂದ್ರುವನ್ನು ಕನ್ನಡಿಯಲ್ಲಿ ಕಂಡ ಮಲ್ಲಣ್ಣ ಡ್ರೈವರ್‌ಗೆ ತುಸು ನಿಲ್ಲಿಸಲು ತಿಳಿಸಿದ. ನೀಲವ್ವ ಬೆದರುತ್ತಾ 'ಬ್ಯಾಡ ಬ್ಯಾಡ ನಡಿ' ಎಂದಳು. ಚಂದ್ರುವಿನ ಕೂಗು 'ಅವ್ವಾ ಅವ್ವಾ' ಎನ್ನುತ್ತಾ ಆಟೊ ಹಿಂಬಾಲಿಸುತ್ತಲೇ ಇತ್ತು. ನೀಲವ್ವ 'ಬ್ಯಾಡ ನಿಲ್ಲಿಸಬ್ಯಾಡ' ಎಂದು ಅರಚುತ್ತಿದ್ದಳು. ಚಂದ್ರು ಸುಸ್ತಾಗಿ ಕುಂತವನೇ ಬಿಟ್ಟ ಕಣ್ಣು ಬಿಟ್ಟಂಗೆ ಆಟೊ ನೋಡುತ್ತ ಏದುಸಿರು ಬಿಡುತ್ತಿದ್ದ. ಆಟೊ ನಿಲ್ಲಲಿಲ್ಲ.


**ವಿಕಾಸ್ ಆರ್. ಮೌರ್ಯ**

ಬೆಂಗಳೂರಿನಲ್ಲಿ ಗಣಿತ ಶಿಕ್ಷಕ. ಗಣಿತದಲ್ಲಿ ಸ್ನಾತಕೋತ್ತರ ಪದವೀಧರ. ದಲಿತ ಚಳವಳಿಯ ಪ್ರಭಾವದಿಂದ ಕನ್ನಡ ಸಾಹಿತ್ಯದ ಪರಿಚಯವಾಗಿ ಕತೆ, ಕವಿತೆಗಳನ್ನು ಬರೆಯಲು ಆರಂಭಿಸಿದ್ದಾರೆ. 'ಚಮ್ಮಟಿಗೆ' ಎಂಬ ಲೇಖನಗಳ ಸಂಗ್ರಹ ಪ್ರಕಟವಾಗಿದೆ.